# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 183
ಸದಸ್ಯರ ಹೆಸರು : ಶ್ರೀ ಗೋವಿಂದರಾಜು (ವಿಧಾನಸಭಾ ಕ್ಷೇತ್ರ)
ಉತ್ತರಿಸುವ ದಿನಾಂಕ : 09.12.2025
ಉತ್ತರಿಸುವ ಸಚಿವರು : ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಸಚಿವರು.

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ಕೋಲಾರ ಜಿಲ್ಲೆಯ ಕೆಜಿಎಫ್‌ನ ಅಂಡರ್‌ಸನ್‌ಪೇಟೆಯಲ್ಲಿದ್ದ ಕೈಗಾರಿಕ ಪ್ರಾಂಗಣವು ಸರ್ಕಾರದ ಸಹಕಾರ ಮತ್ತು ಉತ್ತೇಜನ ಇಲ್ಲದ ಪರಿಣಾಮ ಕೈಗಾರಿಕಾ ಶೆಡ್‌ಗಳು ಬಂದ್ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕೋಲಾರ ಜಿಲ್ಲೆಯ ಕೆ.ಜಿ.ಎಫ್‌ನ ಅಂಡರಸನ್‌ಪೇಟೆಯಲ್ಲಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ವತಿಯಿಂದ 1962-63ನೇ ಸಾಲಿನಲ್ಲಿ ಕೈಗಾರಿಕಾ ವಸಾಹತುವನ್ನು ಸ್ಥಾಪಿಸಿ, 42 ಮಳಿಗೆ ಮತ್ತು 11 ನಿವೇಶನಗಳನ್ನು ಅಭಿವೃದ್ಧಿಪಡಿಸಿ, ಆಸಕ್ತ ಕೈಗಾರಿಕೋದ್ಯಮಿಗಳಿಗೆ ನಿಯಮಾನುಸಾರ ಹಂಚಿಕೆ ಮಾಡಿ, ಸ್ವಾಧೀನಕ್ಕೆ ನೀಡಲಾಗಿದೆ. ಈ ಪೈಕಿ ಶೇಕಡ 75ರಷ್ಟು ಅಂದರೆ 33 ಮಳಿಗೆಗಳು ಮತ್ತು 7 ನಿವೇಶನಗಳಿಗೆ ಶುದ್ಧಕ್ರಯ ಪತ್ರವನ್ನು ಸಹ ನೀಡಲಾಗಿರುತ್ತದೆ. ಸದರಿ ಕೈಗಾರಿಕಾ ವಸಾಹತುವನ್ನು 1983-84 ನೇ ಸಾಲಿನಲ್ಲಿಯೇ ಕೆ.ಜಿ.ಎಫ್ ಪುರಸಭೆಗೆ ಹಸ್ತಾಂತರ ಮಾಡಲಾಗಿದ್ದು, ಸದರಿ ಕೈಗಾರಿಕಾ ವಸಾಹತುವಿನ ಮೂಲಭೂತ ಸೌಕರ್ಯಗಳ ನಿರ್ವಹಣೆಯನ್ನು ಕೆ.ಜಿ.ಎಫ್ ಪುರಸಭೆಯಿಂದ ನಿರ್ವಹಿಸಲಾಗುತ್ತಿದೆ.<br><br>ಸದರಿ ಕೈಗಾರಿಕಾ ವಸಾಹತುವಿನಲ್ಲಿನ 42 ಮಳಿಗೆಗಳ ಪೈಕಿ 21 ಮಳಿಗೆಗಳಲ್ಲಿ ಕೈಗಾರಿಕೆ ಚಟುವಟಿಕೆಗಳು ನಡೆಯುತ್ತಿವೆ.<br><br>ಒಟ್ಟು 11 ನಿವೇಶನಗಳ ಪೈಕಿ 06 ನಿವೇಶನಗಳು ಖಾಲಿ ಇದ್ದು, 02 ನಿವೇಶನಗಳಲ್ಲಿ ಕೈಗಾರಿಕಾ ಚಟುವಟಿಕೆಗಳು ನಡೆಯುತ್ತಿವೆ. ಉಳಿದ 03 ನಿವೇಶನಗಳಲ್ಲಿ ಕೈಗಾರಿಕಾ ಕಟ್ಟಡವು ಪೂರ್ಣಗೊಳ್ಳಲು ಬಾಕಿ ಇರುವುದು ಕಂಡುಬಂದಿದೆ. |
| ಆ) | 1960ರ ದಶಕದಲ್ಲಿ ಕೈಗಾರಿಕಾ ಚಟುವಟಿಕೆಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ಪ್ರಾರಂಭಗೊಂಡಿರುವ ಈ ಕೈಗಾರಿಕಾ ಪ್ರಾಂಗಣವು ಪ್ರಸ್ತುತ ಪಾಳು ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ; | |
| ಇ) | ಪಾಳುಬಿದ್ದಿರುವ ಈ ಕೈಗಾರಿಕಾ ಪ್ರಾಂಗಣವನ್ನು ಪುನರ್‌ಶ್ಚೇತನಗೊಳಿಸಿ ಸ್ಥಳೀಯರಿಗೆ ಉದ್ಯೋಗವಕಾಶ ಕಲ್ಪಿಸಲು ಸರ್ಕಾರ ಚಿಂತಿಸಿದೆಯೆ; | |
| ಈ | ರಾಜ್ಯದಲ್ಲಿಇದುವರೆಗೂ ಎಷ್ಟು ಕೈಗಾರಿಕಾ ಪ್ರಾಂಗಣಗಳಿದ್ದು. ಮುಚ್ಚಲ್ಪಟ್ಟಿವೆ. ಮುಚ್ಚಲು ಕಾರಣವೇನು? | ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಒಟ್ಟು191 ಕೈಗಾರಿಕಾ ವಸಾಹತುಗಳನ್ನು ಅಭಿವೃದ್ಧಿಪಡಿಸಿದ್ದು, ಈ ಪೈಕಿ ಮೈಸೂರು ಜಿಲ್ಲೆಯ ನರಸಿಂಹರಾಜಪುರ ಮತ್ತು ಬಾಗಲಕೋಟೆ ಜಿಲ್ಲೆಯ ಅಸಂಗಿ-ಬನಹಟ್ಟಿ ಈ ಎರಡು ಕೈಗಾರಿಕಾ ವಸಾಹತುಗಳ ಜಾಗವು ಅರಣ್ಯ ಇಲಾಖೆಯ ಅಧಿಸೂಚನೆಯಲ್ಲಿ ಒಳಪಟ್ಟಿದ್ದು, ಸದರಿ ಪ್ರದೇಶದಲ್ಲಿ ಕೈಗಾರಿಕಾ ಚಟುವಟಿಕೆಗಳಿಗೆ ಅರಣ್ಯ ಇಲಾಖೆಯು ಆಕ್ಷೇಪ ವ್ಯಕ್ತಪಡಿಸಿರುವ ಕಾರಣ ಸದರಿ ಕೈಗಾರಿಕಾ ವಸಾಹತುಗಳಲ್ಲಿ ಕೈಗಾರಿಕಾ ಚಟುವಟಿಕೆ ಸಧ್ಯಕ್ಕೆ ಸ್ಥಗಿತಗೊಂಡಿದೆ. |

ಸಿಐ 341 ಸಿಎಸ್‌ಸಿ 2025

**(ಶರಣಬಸಪ್ಪ ದರ್ಶನಾಪೂರ)**
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ಯಮಗಳ
ಸಚಿವರು.